

ಡಾ.ವಿನೋದ ಛೆಬ್ಬಿ

ಪರಸಂಬಂಧವನ್ನು ಅಳೆಯಲು ಸಮಾಜದ ಹಾಗೂ ಕಾನೂನಿನ ಅಳತೆಗೋಲನ್ನು ಉಪಯೋಗಿಸಿದರೆ ಹೇಗೆ?

# 147: ಪರಸಂಬಂಧ-10

ಒಂದು ದಾಂಪತ್ಯವು ಪರಸಂಬಂಧದಿಂದ ಹೊರಬಂದರೂ ಮನದ ಸುಪ್ತ ಬಯಕೆ, ಹಾಗೂ ಆಘಾತದಿಂದ ಹುಟ್ಟುವ ಅಪನಂಬಿಕೆ – ಇವು ಸುಸಂಬಂಧವನ್ನು ಕಟ್ಟಿಕೊಳ್ಳಲು ಅಡ್ಡಿಯಾಗುತ್ತವೆ ಎಂದು ತಿಳಿದುಕೊಂಡೆವು. ಸಮಾಜದ ಧೋರಣೆ ಹಾಗೂ ಕೆಲವೊಮ್ಮೆ ಕಾನೂನು ಕೂಡ ಗೊಂದಲ ಉಂಟುಮಾಡಲು ಸಾಧ್ಯವಿದೆ ಎಂದೂ ಗೊತ್ತಾಯಿತು. ಇದರ ಬಗೆಗೆ ಈ ಸಲ ಇನ್ನಷ್ಟು ತಿಳಿಯೋಣ.

ನಮ್ಮ ಸಮಾಜದಲ್ಲಿ ಪರಸಂಬಂಧವನ್ನು 'ವ್ಯಭಿಚಾರ' ಎಂದು ಕರೆಯಲಾಗಿದ್ದು, ಅಶ್ಲೀಲಕರ, ಅನೀತಿಯುತ ಎಂದು ಪರಿಗಣಿಸಲಾಗುತ್ತದೆ. ಪರಸಂಬಂಧ ಹೊಂದಿದವರನ್ನು ಚರಿತ್ರಹೀನರು ಎಂದೇ ಸಾಮಾನ್ಯವಾಗಿ ನಂಬುತ್ತೇವೆ. ಇಲ್ಲೊಂದು ಸಮಸ್ಯೆಯಿದೆ. ಉದಾಹರಣೆಗೆ, ಒಬ್ಬಳು ಪರಸಂಬಂಧದಲ್ಲಿ ತೊಡಗಿದ್ದ ಗಂಡನನ್ನು ಚರಿತ್ರಹೀನ, ವ್ಯಭಿಚಾರಿ ಎಂದು ನಂಬಿದರೆ, ಮುಂದೆ ಅವನೊಡನೆ ಅನುಬಂಧವನ್ನು ಕಟ್ಟಿಕೊಳ್ಳಲು ಹೇಗೆ ಸಾಧ್ಯವಿದೆ? ಇನ್ನೊಂದು ವಿಷಯವೇನೆಂದರೆ, ಪರಸಂಬಂಧದ ವಿಷಯದಲ್ಲಿ ಹೆಣ್ಣುಗಂಡುಗಳ ನಡುವೆ ಸಮಾಜದಲ್ಲಿ ತಾರತಮ್ಯ ಇದೆ. ಎಡವಿದ ಹೆಂಡತಿಯನ್ನು ಹಿರಿಯರು 'ಚರಿತ್ರಹೀನಳು' ಎಂದು ಹೀಗಳೆದು, ಮನೆಯಿಂದ ಹೊರಹಾಕಲು ಬಯಸುತ್ತಾರೆ; ಎಡವಿದ ಗಂಡನನ್ನು 'ಗಂಡಸರ ಸ್ವಭಾವವೇ ಹೀಗೆ!' ಎಂದು ಸಾಮಾನ್ಯೀಕರಿಸಿ, ಬುದ್ಧಿಹೇಳಿ ಕೈಬಿಡುತ್ತಾರೆ. ಪರಸಂಬಂಧವು ಲೈಂಗಿಕ ಕ್ರಿಯೆಯ ತನಕ ಹೋಗಿಲ್ಲ ಎಂದಾದರೆ ಮಧ್ಯಸ್ಥರ ನಿಲುವು ಬದಲಾಗುತ್ತದೆ. ಮೂರನೆಯ ಪರವ್ಯಕ್ತಿಯಿಂದ ಮುಚ್ಚಳಿಕೆ ಬರೆಸಿಕೊಂಡು ಓಡಿಸಿ, ಸಮಸ್ಯೆಗೆ ತೆರೆ ಎಳೆಯುತ್ತಾರೆ. ಮುರಿದು ಮೂರಾಬಟ್ಟೆಯಾದ ಹೃದಯಗಳನ್ನು ಜೋಡಿಸುವುದರ ಬಗೆಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಆಗ ನೊಂದ ಸಂಗಾತಿಯ ಗತಿ ದೇವರಿಗೇ ಪ್ರೀತಿ.

ಇನ್ನು ಪರಸಂಬಂಧವನ್ನು ಕಾನೂನಿನ ಕಣ್ಣಿನಿಂದ ನೋಡೋಣ. ಭಾರತೀಯ ದಂಡಸಂಹಿತೆಯ ಕಲಮು 497ರ ಪ್ರಕಾರ ಗಂಡಸು ಇನ್ನೊಬ್ಬನ ಹೆಂಡತಿಯೊಂದಿಗೆ (ಅವಳ ಗಂಡನ ಒಪ್ಪಿಗೆಯಿಲ್ಲದೆ) ಸಂಭೋಗದಲ್ಲಿ ತೊಡಗುವುದು ವ್ಯಭಿಚಾರ ಎನ್ನಿಸಿಕೊಳ್ಳುತ್ತದೆ. ವ್ಯಭಿಚಾರವು ಶಿಕ್ಷಾರ್ಹ ಅಪರಾಧ. ವಿಚಿತ್ರವೆಂದರೆ, ಅದರಲ್ಲಿ ಒಳಗೊಂಡ ಹೆಂಡತಿಗೆ ಏನೂ ಶಿಕ್ಷೆಯಿಲ್ಲ! (ಒಂದು ವೇಳೆ ಆಕೆ ಪರಪುರುಷನ ಜೊತೆಗೆ ವಾಸಿಸುತ್ತಿದ್ದರೆ ಗಂಡನು ವಿಚ್ಛೇದನ ಪಡೆಯಬಹುದಷ್ಟೆ.) ಅಂದರೆ, ಪರಸಂಬಂಧದಲ್ಲಿ ತೊಡಗಿದ ನಿಮ್ಮ ಗಂಡನನ್ನು ಶಿಕ್ಷಿಸಬಹುದೇ ಹೊರತು ನಿಮ್ಮ ಹೆಂಡತಿಯನ್ನಲ್ಲ! ಅಷ್ಟಲ್ಲದೆ ಭಾವನಾತ್ಮಕ ಪರಸಂಬಂಧವು ಅಪರಾಧ ಎನಿಸಿಕೊಳ್ಳಲಾರದು– ಯಾಕೆಂದರೆ ಅದು ಅಶರೀರವಾದುದು. ಹಾಗೆಂದು ಅಶರೀರ ಪರಸಂಬಂಧವು ನೊಂದ ಸಂಗಾತಿಗೆ ಕಡಿಮೆ ನೋವುಂಟು ಮಾಡುತ್ತದೆ ಎಂದೇನಲ್ಲ! ಸರ್ವೇಕ್ಷಣದ ಪ್ರಕಾರ, ಭದ್ರಸಂಬಂಧ ಇರುವ ಸಂಗಾತಿಗಳಲ್ಲಿ ಒಬ್ಬರು ಸಂದರ್ಭವಶಾತ್ ವಿವೇಚನೆಯಿಲ್ಲದೆ ಪರಸಂಭೋಗ ನಡೆಸಿದ ಬಹುತೇಕ ಸಂದರ್ಭಗಳಲ್ಲಿ ನೊಂದ ಸಂಗಾತಿಗೆ ಆಗುವ ಆಘಾತವು ಅಷ್ಟೊಂದು ತೀವ್ರವಾಗಿ ಇರುವುದಿಲ್ಲವೆಂದು ಗೊತ್ತಾಗಿದೆ.

ಶರೀರ ಸಂಬಂಧ ಬಿಟ್ಟು ಅಶರೀರದ (virtual) ವ್ಯಾಪ್ತಿಗೆ ಬಂದರೆ ಯಾವುದು ಪರಸಂಬಂಧ ಹೌದು, ಯಾವುದಲ್ಲ ಎನ್ನುವುದರ ಬಗೆಗೆ ಸಾಕಷ್ಟು ಗೊಂದಲವಿದೆ. ಯಾಕೆಂದರೆ ದೂರಸಂಪರ್ಕವು ವ್ಯಾಪಕವಾಗಿರುವ ಈ ಕಾಲದಲ್ಲಿ ಅಶರೀರ ಸಂಪರ್ಕವು ಫೋನ್ ಸೆಕ್ಸ್, ಚಾಟ್‌ರೂಮ್ ಸೆಕ್ಸ್, ಫೇಸ್‌ಬುಕ್ ಸೆಕ್ಸ್, ಇಂಟರ್ನೆಟ್ ಸೆಕ್ಸ್ ಮುಂತಾದ ನಾನಾ ರೀತಿಗಳಲ್ಲಿ ಜಗತ್ತಿನ ಯಾವುದೋ ಮೂಲೆಯಲ್ಲಿರುವ ಅಪರಿಚಿತ ವ್ಯಕ್ತಿಯೊಂದಿಗೂ ನಡೆಯಬಹುದು. ಇದಕ್ಕೊಂದು ದೃಷ್ಟಾಂತ: ಪ್ರೇಮಿಸಿ ಮದುವೆಯಾದ ಗಂಡನು ಹೆಂಡತಿಯಲ್ಲಿ ಸುಮಾರು ವರ್ಷಗಳಿಂದ ಲೈಂಗಿಕ ಆಸಕ್ತಿಯನ್ನು ಕಳೆದುಕೊಂಡಿದ್ದು, ಒಬ್ಬನೇ ಸಾಕಷ್ಟು ಕಾಲ ಕಳೆಯುತ್ತಾನೆ. ಇತ್ತೀಚೆಗೆ ತನ್ನ ಮೊಬೈಲ್‌ಗೆ ಬೀಗ ಜಡಿದಿದ್ದಾನೆ. ಹೆಂಡತಿ ಮೊಬೈಲ್ ಬೀಗ ತೆಗೆದು, ಗಂಡನ ಲೈಂಗಿಕ ಸಾಹಸವನ್ನು ಕಂಡು ದಿಗ್ಭ್ರಮೆಗೊಂಡಿದ್ದಾಳೆ. ಮುಂಚಿನ ರಾತ್ರಿ ಆತ ಎರಡು ಗಂಟೆಗಳ ಅವಧಿಯಲ್ಲಿ ಒಂದಲ್ಲ, ಎರಡಲ್ಲ, ಮೂವರು ಅಪರಿಚಿತ ಮಹಿಳೆಯರೊಂದಿಗೆ ಅಶರೀರ ಸಂಪರ್ಕ ಮಾಡಲು ಹಾತೊರೆದಿದ್ದಾನೆ. ಅವರಿಗೆ ತಮ್ಮ ಖಾಸಗಿ ಭಾಗಗಳನ್ನು ತೋರಿಸಲು ಬೇಡಿಕೊಂಡಿದ್ದಾನೆ. ಒಬ್ಬಳಿಗೆ ತನ್ನ ಉದ್ರಿಕ್ತ ಭಾಗದ ವಿಡಿಯೋ ಕಳಿಸಿದ್ದಾನೆ. ಅವಳೊಪ್ಪಿ ತನ್ನ ಒಳಗನ್ನು 'ಹಂಚಿಕೊಂಡಾಗ' ಜುಮ್ಮೆಂದು ಸುಖಪಟ್ಟಿದ್ದಾನೆ. ಇದನ್ನು ಹೆಂಡತಿಯು ಚಿತ್ರಸಹಿತ ಫೇಸ್‌ಬುಕ್‌ನಲ್ಲಿ ಬಯಲು ಮಾಡಿದ್ದಾಳೆ. ಸೈಬರ್ ಅಪರಾಧ ಶಾಖೆಗೆ ದೂರು ಕೊಟ್ಟು ವಿಚ್ಛೇದನಕ್ಕೆ ಹೊರಟಾಗ ಗಂಡ ಕಾಲು ಹಿಡಿದದ್ದರಿಂದ ಅವನಿಗೊಂದು ಅವಕಾಶ ಕೊಡಬೇಕು ಎಂದು ನನ್ನಲ್ಲಿ ಕರೆದುಕೊಂಡು ಬಂದಿದ್ದಾಳೆ. ಅಶರೀರ ಸುಖಕ್ಕೆ ಇಷ್ಟೊಂದು ಮುಂದೆ ಹೋಗಬೇಕು ಎಂದೇನಿಲ್ಲ. ತನ್ನ ಗಂಡನು ಒಬ್ಬನೇ ನೀಲಿ ಚಿತ್ರಗಳನ್ನು ವೀಕ್ಷಿಸುವುದೂ ಪರಸಂಬಂಧಕ್ಕೆ ಸಮ ಎಂದು ಕೆಲವು ಮಹಿಳೆಯರು ದೂರುತ್ತಾರೆ.

ಮೇಲೆ ಹೇಳಿದ ಗೊಂದಲಕರ ವರ್ತನೆಗಳಲ್ಲಿ ಒಂದು ಸಾಮಾನ್ಯ ಅಂಶವಿದೆ: ಸಂಗಾತಿಗೆ ಗೊತ್ತಿಲ್ಲದಂತೆ, ರಹಸ್ಯಮಯವಾಗಿ ನಡೆಸುವ ಚಟುವಟಿಕೆ. ಅಂದರೆ ಅಸಮ್ಮತ ರಹಸ್ಯವೇ ಪರಸಂಬಂಧದ ಜೀವಾಳ! ಸಂಗಾತಿಗೆ ಗೊತ್ತುಪಡಿಸಿ ನಡೆಸುವುದು ಪರಸಂಬಂಧ ಎನಿಸಿಕೊಳ್ಳುವುದಿಲ್ಲ. ನನಗೆ ಗೊತ್ತಿರುವ ಧನಾಢ್ಯನೊಬ್ಬ ಆಗಾಗ ಹೊಸಬಳೊಡನೆ ಲೈಂಗಿಕ ಸಂಪರ್ಕ ಮಾಡುತ್ತಾನೆ. ಹೆಂಡತಿಗೆ ಅದನ್ನು ಹೇಳಿಕೊಳ್ಳುತ್ತ ಅವಳೊಡನೆ ಸುಖಿಸುತ್ತಾನೆ. ಆಕೆಯು ಇದನ್ನು ಅಷ್ಟೇನೂ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಇನ್ನೊಬ್ಬನು ಹೆಂಡತಿಯ ಸಮ್ಮತಿ ಪಡೆದು ಆಕೆಯ ವಿಧವೆ ತಂಗಿಯ ಜೊತೆಗೆ ಸಂಬಂಧ ಇಟ್ಟುಕೊಂಡಿದ್ದಾನೆ. ಹಾಗೆಯೇ, ಇಬ್ಬರು ದಂಪತಿಗಳ ನಡುವೆ ನಡೆಯುವ ಅದಲು ಬದಲು (wife swapping) 'ಪರಸಂಬಂಧ' ಎನ್ನಿಸಿಕೊಳ್ಳುವುದಿಲ್ಲ. ಒಟ್ಟಿನಲ್ಲಿ ಪರಸಂಬಂಧವನ್ನು ಅಂತರ್ವೈಯಕ್ತಿಕ ನೆಲೆಗಟ್ಟಿನಲ್ಲಿ ನೋಡಬೇಕಾಗುತ್ತದೆಯೇ ವಿನಾ ಸಾರ್ವಜನಿಕರ ಅಥವಾ ಕಾನೂನಿನ ದೃಷ್ಟಿಯಿಂದ ನೋಡಲು ಆಗುವುದಿಲ್ಲ. ಇಲ್ಲಿ ರಹಸ್ಯ ಹಾಗೂ ಅಸಮ್ಮತಿ ಇವೆರಡೇ ಸೂಚಕಗಳಾಗುತ್ತವೆ.

ಕೌತುಕದ ಪ್ರಶ್ನೆ ಏನೆಂದರೆ, ಪರಸಂಬಂಧದಲ್ಲಿ ರಹಸ್ಯ ಏಕಿದೆ? ಮರ್ಯಾದೆಯನ್ನೋ ಬದ್ಧಸಂಗಾತಿಯನ್ನೋ ಕಳೆದುಕೊಳ್ಳುವ ಭಯದಿಂದ ಎನ್ನುವ ಉತ್ತರ ತೀರಾ ಸರಳ ಎನ್ನಿಸುತ್ತದೆ. ಎಸ್ತರ್ ಪೆರೆಲ್ ಪ್ರಕಾರ, ಪರಸಂಬಂಧಕ್ಕೆ ಪ್ರಬಲ ಸುಪ್ತ ಕಾರಣವಿದೆ. ಇದರ ಹಿಂದೆ ತನ್ನನ್ನೇ ತಾನು ಕಂಡುಕೊಳ್ಳುವ ಬಯಕೆಯಿದೆ. ತನ್ನಿಷ್ಟದಂತೆ ತಾನಾಗಬೇಕು ಎನ್ನುವ ನಿರೀಕ್ಷೆಯಿದೆ. ತಾನೀಗ ಬದುಕಿರುವುದಕ್ಕಿಂತ ಹೆಚ್ಚು ಜೀವಂತಿಕೆಯಿಂದ ಬದುಕಬೇಕೆಂಬ ಛಲವಿದೆ. ತಾನು ಹಾಕಿಕೊಂಡ ಮಿತಿಮೇರೆಗಳನ್ನು ತಾನೇ ದಾಟಬೇಕೆಂಬ ಸ್ವೇಚ್ಛೆಯಿದೆ. (ಲಕ್ಷ್ಮೀಶ ತೋಳ್ಪಾಡಿ ಅವರ 'ಬೇಲಿಯ ಮೇಲಿನ ಹೂವು' ನೆನಪಾಗುತ್ತಿದೆ.) ತನ್ನಿಂದ ಹೊರಸೂಸುವ ಕಾಂತಿಯಲ್ಲಿ ತಾನೇ ಬೆಳಗಬೇಕು ಎಂಬ ಕಲ್ಪನೆಯಿದೆ. ಇದು ತನ್ನ ಸಂಗಾತಿಯಿಂದ ದೂರವಾಗುವ ಹವಣಿಕೆಯಲ್ಲ, ತಾನೇನು ಆಗಿದ್ದೇನೋ ಅದನ್ನು ಬಿಟ್ಟು ಇನ್ನೇನೋ ಆಗಲು ಹೊರಟಿರುವುದನ್ನು ಇದು ಸೂಚಿಸುತ್ತದೆ. ತನಗಿಂತ ಮಹತ್ತರವಾದ 'ತನ್ನ ಇನ್ನೊಬ್ಬ'ರನ್ನು ಕಂಡುಕೊಳ್ಳುವುದು ಇದರಲ್ಲಿದೆ. 'ನನಗಿಂತ ದೊಡ್ಡ ವ್ಯಕ್ತಿ ನಾನೇ!' ಎನ್ನುವ ಅನುಭೂತಿಗೆ ಒಡ್ಡಿಕೊಳ್ಳುತ್ತ, ತನ್ನ ಕಾಲಿಗೆ ತಾನೇ ನಮಸ್ಕರಿಸುವ ಪ್ರಯತ್ನ ಇದರ ಹಿಂದಿದೆ.

ಈ ಪರಿಕಲ್ಪನೆಯು ಕೆಲವರಿಗೆ – ಅದರಲ್ಲೂ ಪರಸಂಬಂಧ ಎಂದರೆ ವ್ಯಭಿಚಾರ, ಅನೈತಿಕ ಎನ್ನುವವರಿಗೆ – ಹಿಡಿಸಲಿಕ್ಕಿಲ್ಲ. ಆದರೆ ನಂಬಿದರೆ ನಂಬಿ, ಬಿಟ್ಟರೆ ಬಿಡಿ, ಪರಸಂಬಂಧದಿಂದ ಜರ್ಜರಿತವಾದ ದಾಂಪತ್ಯವನ್ನು ನೇರ್ಪುಗೊಳಿಸಲು ಇದೇ ಪರಿಕಲ್ಪನೆಯನ್ನು ಬಳಸಿಕೊಳ್ಳಲಾಗುತ್ತದೆ!

ಇದು ಹೇಗೆಂದು ಮುಂದಿನ ಸಲ ನೋಡೋಣ.